

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಬಸವ ಜಯಂತಿಯ ಸಾರ್ಥಕತೆ

**ಕ**ಳೆದ ಭಾನುವಾರ ಬಸವ ಜಯಂತಿ. ಈ ವರ್ಷ ಅಷ್ಟೇನೂ ಉತ್ಸಾಹದಾಯಕವಾಗಿರಲಿಲ್ಲ. ಪತ್ರಿಕೆಗಳಲ್ಲೂ ಈ ಸಂಬಂಧವಾದ ಲೇಖನಗಳು ಕಡಿಮೆ. ಹಳ್ಳಿಯ ಜನರು ಗ್ರಾಮಪಂಚಾಯಿತಿ ಚುನಾವಣೆಯ ಲೆಕ್ಕಾಚಾರದಲ್ಲಿದ್ದರೆ ಸರ್ಕಾರೀ ನೌಕರರು ರಜಾದಿನದ ನಷ್ಟದ ಲೆಕ್ಕಾಚಾರದಲ್ಲಿದ್ದರು!

ಬಸವಣ್ಣ ಹುಟ್ಟಿದ್ದು ವೈಶಾಖ ಶುದ್ಧ ಅಕ್ಷಯ ತದಿಗೆಯಂದು, ಬಿಜಾಪುರದ ಇಂಗಳೇಶ್ವರ ಬಾಗೇವಾಡಿಯಲ್ಲಿ. ಈಗ ಅದನ್ನು ಬಸವನ ಬಾಗೇವಾಡಿ ಎಂದು ಕರೆಯುತ್ತಾರೆ. ಬಸವಣ್ಣನವರ ಈ ಜನ್ಮಸ್ಥಳದಲ್ಲಿ ಸರ್ಕಾರ ಅಷ್ಟಭುಜಾಕೃತಿಯ ಭವ್ಯ ಸ್ಮಾರಕವನ್ನು ನಿರ್ಮಿಸಿದೆ. 'ಶ್ರೇಯಾಂಸಿ ಬಹುವಿಘ್ನಾನಿ' ಎಂಬಂತೆ ಚುನಾವಣಾ ನೀತಿಸಂಹಿತೆ, ವರುಣನ ಅವಕೃಪೆಯಿಂದ ಪೆಂಡಾಲು ನೆಲಸಮ ಇತ್ಯಾದಿ ನೂರೆಂಟು ವಿಘ್ನಗಳ ಮಧ್ಯೆಯೂ ನಾಡಿನ ಪ್ರತಿಷ್ಠಿತ ಮಠಾಧೀಶರ ಸಮ್ಮುಖದಲ್ಲಿ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರಿಂದ ಮೊನ್ನೆ ಅದರ ಉದ್ಘಾಟನೆ. ಇದರ ಹಿಂದೆ ಇದ್ದ ಸ್ಥಳೀಯ ಯುವಕರ ಮತ್ತು ಕೂಡಲಸಂಗಮದ ವಿಶೇಷಾಧಿಕಾರಿ ಡಾ. ಎಸ್.ಎಂ. ಜಾಮ್‌ದಾರ್ ಅವರ ಪ್ರಯತ್ನ ನಿಜಕ್ಕೂ 'ಇಮಾಂದಾರ್ ಔರ್ ಶಾನ್‌ದಾರ್'! ನೆಲ ಅಂತಸ್ತಿನಲ್ಲಿ ಒಂದು ಗ್ರಂಥಾಲಯ ಮತ್ತು ಸಭಾಂಗಣ. ಮೇಲಂತಸ್ತಿನ ವಿಶಾಲವಾದ ಕೊಠಡಿಯ ಒಳಭಾಗದಲ್ಲಿ ಬಸವಣ್ಣನವರ ಜೀವನದ ಪ್ರಮುಖ ಘಟನೆಗಳನ್ನು ಬಿಂಬಿಸುವ ಭಿತ್ತಿಚಿತ್ರಗಳು, ಮಧ್ಯಭಾಗದಲ್ಲಿ ಎತ್ತರದ ಕಟ್ಟೆಯ ಮೇಲೆ ಬಂಗಾರ ಲೇಪನದ ಮೂರು ಕಂಚಿನ ವಿಗ್ರಹಗಳು: ತನ್ನ ಮುದ್ದು ಕಂದನನ್ನು ತೊಡೆಯ ಮೇಲಿರಿಸಿಕೊಂಡ ತಾಯಿ ಮಾದಲಾಂಬಿಕೆ, ಸಂತೋಷದಿಂದ ನಿಂತು ನೋಡುತ್ತಿರುವ ತಂದೆ ಮಾದರಸ ಮತ್ತು ಮಗುವನ್ನು ಆಶೀರ್ವದಿಸುತ್ತಿರುವ ಕುಲಗುರುಗಳು.

ಬಸವಣ್ಣನವರ ಜೀವನಚರಿತ್ರೆಯನ್ನು ನಿರೂಪಿಸುವ ಅನೇಕ ಪ್ರಾಚೀನ ಗ್ರಂಥಗಳಿವೆ. ಹರಿಹರನ ಬಸವರಾಜದೇವರ ರಗಳೆಯನ್ನೂ ಒಳಗೊಂಡಂತೆ ಕನ್ನಡ, ತೆಲುಗು ಮತ್ತು ಸಂಸ್ಕೃತದಲ್ಲಿರುವ ಈ ಪುರಾಣಗಳು ಆರಂಭಿಸುವುದು ಕೈಲಾಸದಲ್ಲಿರುವ ಶಿವನ ಒಡ್ಡೋಲಗದಿಂದ. ಇದಕ್ಕಿಂತ ವಿಭಿನ್ನವಾಗಿ ಕೌಟುಂಬಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಚಿತ್ರಿಸುವ ಪ್ರಯತ್ನವನ್ನು ಮಾಡಿರುವವರು ಖ್ಯಾತ ಸಾಹಿತಿಗಳಾದ ಪ್ರಭುಶಂಕರ ಅವರು. 1982 ರಲ್ಲಿ ಅವರು ಬರೆದ 'ಬೆರಗು' ಎಂಬ ಪುಸ್ತಕ ನಿಜಕ್ಕೂ ಬೆರಗನ್ನುಂಟುಮಾಡುವ ಚಿಕ್ಕ ಹಾಗೂ ಚೊಕ್ಕವಾದ ಗ್ರಂಥ. ಈ ಪುಸ್ತಕ ಬರೆಯಲು ಅವರಿಗೆ ಸ್ಫೂರ್ತಿ ನೀಡಿದ ಗ್ರಂಥವೆಂದರೆ ಅವರೇ ಹೇಳಿಕೊಂಡಿರುವಂತೆ ಖಲೀಲ್ ಗಿಬ್ರಾನ್ ಅವರ "Jesus, the Son of Man" ಎಂಬ ಪುಸ್ತಕ. ಏಸುಕ್ರಿಸ್ತನ ಒಡನಾಡಿಗಳು ಕ್ರಿಸ್ತನ ಬಗ್ಗೆ ತಮ್ಮ ಆತ್ಮೀಯರೊಂದಿಗೆ ಹಂಚಿಕೊಂಡ ಅಂತರಂಗದ ಮಾತುಗಳು ಅದರಲ್ಲಿವೆ. ಅದೇ ಶೈಲಿಯಲ್ಲಿ ಬಸವಣ್ಣನವರನ್ನು ಕುರಿತು ಅವರಿಗೆ ಆಗುವವರು ಮತ್ತು ಆಗದವರ ಬಾಯಲ್ಲಿ ಹೇಳಿಸಿರುವ 'ಬೆರಗು' ತುಂಬಾ ಮನೋಜ್ಞವಾಗಿದೆ. ಇದನ್ನು ಅನೇಕಬಾರಿ ನಾವು ಓದಿ ಆನಂದಿಸಿದಂತೆ ಸಹೃದಯ ಓದುಗರಾದ ನೀವೂ ಸಹ ಓದಿ ಆನಂದಿಸಲೆಂದು ಕಥಾನಿರೂಪಣೆಗೆ ಧಕ್ಕೆಯಾಗದಂತೆ ಸಾಂಕೇತಿಕವಾಗಿ ಕೆಲವರ ಕೆಲವು ಮಾತುಗಳನ್ನು ಮಾತ್ರ ಹೆಕ್ಕಿ ತೆಗೆದು ಇಲ್ಲಿ ಜೋಡಿಸಿ ಕೊಡಲಾಗಿದೆ. ಮೈಸೂರಿನಲ್ಲಿ ನಮ್ಮ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರಭುಶಂಕರ ಅವರೊಂದಿಗೆ ದೂರವಾಣಿಯಲ್ಲಿ ಸಂಪರ್ಕಿಸಿದಾಗ 'ಧಾರಾಳವಾಗಿ' ಒಪ್ಪಿಗೆ ಸೂಚಿಸಿದಂತೆ ಅವರ ಬರಹವನ್ನು ಧಾರಾಳವಾಗಿಯೇ ಇಲ್ಲಿ ಬಳಸಿಕೊಳ್ಳಲಾಗಿದೆ:

****************

**ಮಾದಿರಾಜ (ತಂದೆ):** ಓ, ಅವನ ವಿಷಯವೆ? ಅದನ್ನೇನು ಕೇಳುತ್ತೀರಿ, ಬಿಡಿ. ನಮ್ಮ ವಂಶಕ್ಕೇ ಕೆಟ್ಟ ಹೆಸರು ತಂದವನು. ಬ್ರಾಹ್ಮಣನಿಗೆ ಮುಖ್ಯ ಜನಿವಾರ. ಅದನ್ನ ಯಜ್ಞೋಪವೀತ ಅಂತಾರೆ, ಪವಿತ್ರ ಅಂತಾರೆ. ಅಂಥದನ್ನೇ ಕಿತ್ತೆಸೆದನಲ್ಲ. ಅಂಥವನ ವಿಷಯ ಯಾವ ಬಾಯಲ್ಲಿ ಹೇಳಲಿ? ನೀಚ, ಪರಮ ನೀಚ. ಅಂಥವ ಏಕೆ ತಾನೆ ನಮ್ಮ ಮನೆಯಲ್ಲಿ ಹುಟ್ಟಿದನೋ ಅಂತ ಗೋಳಾಡ್ತಿದೀವಿ.

ನೋಡಿ, ಈಗಾಗಲೇ ನಿಮ್ಮ ಕಿವಿಗೆ ಬಿದ್ದಿರಬೇಕು, ನಮ್ಮದು ತುಂಬ ಪವಿತ್ರವಾದ ವಂಶ. ಅದರಲ್ಲೂ ನಾವು ಸಾಂಖ್ಯಾಯನ ಗೋತ್ರದವರು, ಕಮ್ಮೆ ವಂಶ. ನಮ್ಮ ಪೂರ್ವಿಕರು ಯಜ್ಞ ಯಾಗ ಮಾಡಿಸಿದವರು. ವೇದಾಧ್ಯಯನ ಚೆನ್ನಾಗಿ ಮಾಡಿದವರು ಸ್ವಾಮಿ, ಅವರು. ವೇದಗಳನ್ನ ನಾಲಗೆಯ ತುದಿಯಲ್ಲಿ ಮೆರೆಸಿದವರು ಅಂತ ಪ್ರಸಿದ್ಧಿ. ಇವತ್ತಿಗೂ ದೂರ ದೂರದ ಊರಿಂದ ಜನ ನಮ್ಮ ಮನೆ ವಿಚಾರಿಸಿಕೊಂಡು ಬರ್ತಾರೆ, ನಿಮ್ಮಲ್ಲಿದ್ದು ಓದಬಹುದೆ ಅಂತ ಕೇಳ್ತಾರೆ. ಇಂಥ ವಂಶದಲ್ಲಿ ಅಂಥವನು ಹುಟ್ಟಬಹುದೇ? ಹೇಳಿ, ನೀವೇ ಹೇಳಿ.

ಇನ್ನೇನಿಲ್ಲ, ನಾನೂ ಇವಳೂ - ಹೆಸರೆ? ಮಾದಾಂಬೆ - ಮಕ್ಕಳಿಲ್ಲದೆ ವರ್ಷಗಟ್ಟಲೆ ಯಾತನೆ ಪಟ್ಟೆವು. ಕಂಡ ಕಂಡ ದೇವರಿಗೆಲ್ಲ ಹರಕೆ ಹೊತ್ತೆವು. ತೀರ್ಥಯಾತ್ರೆ ಅಂತ ಸುತ್ತಾಡಿದೆವು. ಯಾರ್‍ಯಾರು ಯಾವ್ಯಾವ ವ್ರತ ಮಾಡೀಂದ್ರೆ ಅದನ್ನೆಲ್ಲ ಮಾಡಿದೆವು. ದಿನಗಟ್ಟಲೆ, ವಾರಗಟ್ಟಲೆ ಉಪವಾಸ, ಜಾಗರಣೆ ಎಲ್ಲಾ ಆಯ್ತು. ಕೊನೆಗೆ ಎಲ್ಲಾ ಸಾಕಾಗಿ ನಮ್ಮ ಹಣೆ ಬರಹ ಅಂತ ಸುಮ್ಮನಾದೆವು. ಒಂದು ದಿನ ಯಾರೋ ಒಬ್ಬರು ಬಂದರು. ವೃದ್ಧರು, ತೇಜಸ್ಸಿನ ಪುಂಜದಂತೆ ಇದ್ದರು. ಯಾವುದೋ ಓಲೆಗರಿ ಹಾಳೆ ತಿರುವುತ್ತಿದ್ದವರು ಕೇಳಿದರು: 'ಒಂದು ವ್ರತ ಮಾಡುತ್ತೀರಾ? ನಿಮಗೆ ಖಂಡಿತ ಮಕ್ಕಳಾಗುತ್ತೆ.' 'ಯಾವ ವ್ರತ?' 'ವೃಷಭವ್ರತ ಅಂತ'. ವಾರ ದಿನ ನೋಡಿ ವ್ರತ ಮಾಡಿಸಿದರು. ಕೊನೆಗೆ ಅವರು ಮಾಡಿಸಿದ್ದೂ ಹತ್ತರ ಥರ ಹನ್ನೊಂದನೇ ವ್ರತ ಎಂದು ಸುಮ್ಮನಾದೆವು. ಒಂದು ದಿನ ಅವಳ ಕಣ್ಣನ್ನು ಯಾಕೋ ನೋಡಿದೆ. ಅಲ್ಲಿ ನೀರಿರಲಿಲ್ಲ, ಬೆಳಕು ಚಿಮ್ಮುತ್ತಿತ್ತು.

ಮಗು ಹುಟ್ಟಿತು. ಅದು ಮಗುವೆ? ಮಾಣಿಕ್ಯ. ನಮ್ಮ ಮನೆಯಲ್ಲಿ ಎಂಟು ವರ್ಷ ಬೆಳಕಿನ ಹೊಳೆ ಹರಿಯಿತು. ನಿತ್ಯೋತ್ಸವ. ಇನ್ನೇನು ಹೇಳಲಿ, ಅದರ ಮುಂದಿನದೆಲ್ಲ ಗೋಳು, ಹಟಮಾರಿತನ, ಹೊಡೆತ, ಅವಮಾನ. ನಾನು ಬ್ರಾಹ್ಮಣನಾಗಿ ಹುಟ್ಟಿದ್ದಕ್ಕೆ ಮೂರೆಳೆ ಜನಿವಾರ ಕತ್ತಿನಲ್ಲಿ ಹಾಕೋಣ ಅಂತ ಹೊರಟೆ. ಇವನು ಇದೆಲ್ಲಾ ಏನು, ಯಜ್ಞೋಪವೀತ ಅಂದರೇನು, ಅದು ಹೇಗೆ ಪವಿತ್ರ ಅಂತ ಹರಟೋದೆ? ಅದೂ ಹತ್ತು ಜನದ ಮುಂದೆ ಹಾಗೆ ನನಗೆ ಅವಮಾನ ಮಾಡೋದೆ?

**ಮಾದಲಾಂಬಿಕೆ (ತಾಯಿ):** ನನ್ನ ಮಗುವನ್ನು ಕಂಡರೆ ಇವರಿಗೆ ಅಷ್ಟೂ ದ್ವೇಷ. ಎಂಟು ವರ್ಷದ ಮಗುವಿಗೆ ಇದು ಸರಿ, ಅದು ತಪ್ಪು ಅಂತ ತಿಳಿಯುತ್ತೆ? ಇವರಿಗೆ ವಯಸ್ಸಾದ್ದು ದಂಡಕ್ಕೆ. ಅಷ್ಟೂ ಗೊತ್ತಾಗಬೇಡವೆ? ಎಂಥ ಮಗು ಅಂತೀರಿ? ಅದು ಅಂಬೆಗಾಲಿಡುವಾಗ ಕೃಷ್ಣನದೇ ನೆನಪು ನಮಗೆ. ಬಣ್ಣ ಮಾತ್ರ ಅಚ್ಚ ಬಿಳುಪು. ಅದು ನಡೆದಾಡಿದರೆ ತಿಳಿಯುತ್ತಲೇ ಇರಲಿಲ್ಲ. ಗಾಳಿ ಬೀಸಿದಂತೆ, ನದಿ ಹರಿದಂತೆ. ಆರು ವರ್ಷಕ್ಕೆ ವೇದ ಹೇಳುತ್ತಿತ್ತು. ಯಾವ ಶ್ಲೋಕ ಕೇಳಿ. ಅವನ ಕನ್ನಡ, ಅಂಥ ಕನ್ನಡ ನಾನು ಕೇಳೇ ಇಲ್ಲ._ನನ್ನ ಮಗು ಅಂತ ಇಲ್ಲದ್ದು ಹೇಳುತ್ತೇನೆಯೇ? ಅವನದ್ದು ಒಂದೇ ತಪ್ಪು. ಮಾತೆತ್ತಿದರೆ ಇದು ಏಕೆ? ಅದು ಏಕೆ? ಅಂತ ಕೇಳೋದು. ವೇದ ಓದು, ಏಕೆ? ವ್ಯಾಕರಣ ಕಲಿ, ಏಕೆ? ಹೋಮ ಹವನ ಮಾಡೋದು ಏಕೆ? ಇಲ್ಲಿ ಹವಿಸ್ಸು ಕೊಟ್ಟರೆ ಮೇಲಿರೋ ದೇವರಿಗೆ ಸೇರುತ್ತದೋ? ನಾವು ಮೇಲು, ಹೊಲಗೇರಿಯವರು ಕೀಳು, ಏಕೆ? ಶೂದ್ರರ ಮನೆಯಲ್ಲಿ ಊಟ ಮಾಡಬಾರದು, ಏಕೆ? ಹೊಲಗೇರಿಯವರು ನಮ್ಮ ಮನೆಗೆ ಬರಬಾರದು, ಏಕೆ?

ಇವರಿಗೋ ತಾಳ್ಮೆ ಇಲ್ಲ. ಮಗು ಪ್ರಶ್ನೆ ಕೇಳಿದರೆ ಉತ್ತರ ಹೇಳೋದು ಬಿಟ್ಟು ದಬ ದಬ ಬಡಿಯೋದು. ಉತ್ತರ ತಿಳಿಯದ್ದಕ್ಕೋ ಏನೋ. ಅಕ್ಕ ಪಕ್ಕದ ಶನಿಗಳು ಮುಸು ಮುಸು ನಗೋದು. ಅದಕ್ಕೆ ಎಂಟು ವರ್ಷ ತುಂಬಿತ್ತೋ ಇನ್ನೂ ಇಲ್ಲವೋ. ಇವರು ಅದಕ್ಕೆ ಮುಂಜಿ ಮಾಡುತ್ತೇನೆ ಅಂತ ಅಂದರು. ಅದು, ಮುಂಜಿ ಗಿಂಜಿ ಎಲ್ಲ ಕೆಲಸಕ್ಕೆ ಬಾರದ್ದು, ಅದರಿಂದೇನೂ ದೇವರು ಸಿಕ್ಕೋದಿಲ್ಲ ಅಂದುಬಿಡ್ತು. ಇವರು ಹಿಡಿದ ಹಟ ಇವರಿಗೆ, ಅದರ ಹಟ ಅದಕ್ಕೆ. ಅದನ್ನು ಹಿಡಿದು ಮೂರೆಳೆ ದಾರ ಹಾಕಿದರು. ಹಟದಲ್ಲಿ ಅದರದ್ದೇನು ಕಡಮೆ? ಅದು, ಸೇರಿದ ಬ್ರಾಹ್ಮಣರು ಮಂತ್ರ ಹೇಳುತ್ತಿರುವಾಗಲೇ ಎದ್ದು ಜೋರಾಗಿ ಕೂಗಿ ಜನಿವಾರ ಕಿತ್ತು ಎಸೆದು ಮನೆ ಬಿಟ್ಟು ಓಡಿಹೋಯಿತು. ಅರಿಯದ ಹಸುಳೆ ಜನಿವಾರ ಕಿತ್ತೆಸದದ್ದಕ್ಕೆ 'ಬ್ರಾಹ್ಮಣ್ಯವೇ ಹೊರಟು ಹೋಯಿತು' ಅಂತ ಕುಣಿದಾಡಿದ್ರು.

ನನ್ನ ಮಗು ಈಗ ನನ್ನ ಪಾಲಿಗೆ ಇಲ್ಲ. ಅವರಿವರನ್ನ ಕೇಳಿದರೆ ಇಲ್ಲೇ ಎಲ್ಲೋ ಹತ್ತಿರದಲ್ಲೇ ಇದೆ ಅಂತಾರೆ. 'ಹೋಗಿ, ಹುಡುಕಿ ಕರೆತನ್ನಿ, ಏನೋ ಒಂದು ಸಲ ದುಡುಕಿ ಮಗು ಹಾಗೆ ಮಾಡಿತು' ಅಂದರೆ ಇವರ ಬಾಯಲ್ಲಿ ಬರೋ ಮಾತು: 'ನಮ್ಮ ವಂಶಕ್ಕೇ ಕೆಟ್ಟ ಹೆಸರು ತಂದ ಆ ಅಯೋಗ್ಯ. ಅವನ್ನ, ನಾನು ಹುಡುಕಿಕೊಂಡು ಹೋಗೋದೇ? ಅವನಾಗೇ ಬರಲಿ - ಬಂದರೂ ಮನೆ ಹೊಸ್ತಿಲು ಹತ್ತೋಕೂ ಬಿಡೋಲ್ಲ.'

ಈಗ ನನಗೂ ಇವರಿಗೂ ಮಾತಿಲ್ಲ. ನಮ್ಮಿಬ್ಬರ ಮಧ್ಯೆ ಮೌನ ಹೆಪ್ಪುಗಟ್ಟಿದೆ. ಈಚೆ ದಡದಲ್ಲಿ ನಾನು, ಆಚೆ ದಡದಲ್ಲಿ ಅವರು.

**ಈಶಾನ್ಯ ಮೂರ್ತಿ (ಗುರುಗಳು):** ಈ ಶಿವಾಲಯಕ್ಕೆ ಅವನು ಬಂದ ದಿನ ನನಗೆ ಚೆನ್ನಾಗಿ ನೆನಪಿದೆ. ಹೊಂಬೆಳಕಿನ ದೇಹ. ಬೆದರಿದ ಜಿಂಕೆಯ ಹಾಗೆ ಒಂದು ಕಂಬದ ಮರೆಯಲ್ಲಿ ಅವಿತು ನಿಂತಿದ್ದ. ಚಿಕ್ಕ ಹುಡುಗ, ಎಂಟು ಹತ್ತು ವರ್ಷದವನು, ಒಬ್ಬನೇ ಹಾಗೆ ನಿಂತದ್ದು ನೋಡಿ ನನಗೆ ಮರುಕ ಉಕ್ಕಿ ಬಂತು. ಹತ್ತಿರ ಹೋಗಿ ನೋಡಿದೆ. ಅಷ್ಟರಲ್ಲಿ ಮರುಕ ಪ್ರೀತಿಯಾಗಿತ್ತು. ನಾನೂ ಒಂಟಿ ಜೀವ. ಜೊತೆಗೊಬ್ಬರು ಸಿಕ್ಕಿದ ಹಾಗಾಯಿತು. ನನ್ನ ಹಾಗೇ ಅವನೂ ಈ ದೇವಸ್ಥಾನದಲ್ಲೇ ಇದ್ದು ನನಗೆ ತಿಳಿದ ನಾಲ್ಕಕ್ಷರ ಹೇಳಿಕೊಡೋಣ ಅಂತ ನೋಡಿದರೆ ಅವನಿಗೆ ವಯಸ್ಸಿಗೆ ಮೀರಿದ ಜ್ಞಾನ ಸಾಧಿಸಿತ್ತು. ವೇದದ ಯಾವ ಭಾಗ ಕೇಳಲಿ ತಡವರಿಸದೆ ಹೇಳುತ್ತಿದ್ದ. ಯಾರದೋ ಬ್ರಾಹ್ಮಣರ ಮನೆಯ ಹುಡುಗ ಅಂದುಕೊಂಡೆ. ಶಿವನ ಮುಂದೆ ಕಣ್ಣು ಮುಚ್ಚಿ ಧ್ಯಾನಕ್ಕೆ ಕುಳಿತ. ಆ ವಯಸ್ಸಿಗೇ ಎಂಥ ತನ್ಮಯತೆ! ಭಕ್ತಿ ಎಂದರೆ, ಧ್ಯಾನ ಎಂದರೆ ಅವನಿಂದ ಕಲಿಯಬೇಕು. ಮಧ್ಯರಾತ್ರಿಯೋ ಬೆಳಗಿನ ಜಾವವೋ ಕಣ್ಣು ಬಿಟ್ಟು ನೋಡಿದರೆ ಶಿವನ ಮುಂದೆ ಕಣ್ಣು ಮುಚ್ಚಿ ಕೂತಿರುತ್ತಿದ್ದ. ಹಾಗೆಯೇ ಹತ್ತೋ ಹನ್ನೊಂದೋ ವರ್ಷಗಳು ಉರುಳಿ ಹೋದವು. ಬಸವ ಒಂದು ದಿನ ನನ್ನ ಎದುರಿಗೆ ಬಂದು ತಲೆ ತಗ್ಗಿಸಿ ನಿಂತುಕೊಂಡ. 'ಏನು?' ಎಂದು ಕೇಳಿದೆ. 'ನಾನು ಇಲ್ಲಿಂದ ಹೋಗುತ್ತೇನೆ' ಎಂದ. ಅವನ ಉತ್ತರ ಕೇಳಿ ನನಗೆ ದಿಗ್ಭ್ರಮೆಯಾಯಿತು. ಅವಧೂತನಾದ ನನಗೂ ಮೋಹ ಹುಟ್ಟುವ ಮಟ್ಟಿಗೆ ಅವನು ನನ್ನ ಹೃದಯಕ್ಕೆ ಹತ್ತಿರವಾಗಿದ್ದ, ಮುದ್ದಿನ ಮಗನಾಗಿದ್ದ. ನಾನು ನೂರಾರು ರೀತಿ ಹೇಳಿದೆ. ಕೇಳಲಿಲ್ಲ. ಕೈಮುಗಿದು ನಿಂತ ನಿಲುವಿನಲ್ಲೇ ಹೊರಟು ಹೋದ. ಮಂಗಳವೇಡೆಯ ಕಡೆ ಬಿರು ಬಿರನೆ ಹೆಜ್ಜೆ ಹಾಕಿಕೊಂಡು ಹೋದ ಎಂದು ನೋಡಿದವರು ಹೇಳಿದರು.

**ಚಂದ್ರಚೂಡ ಶಾಸ್ತ್ರಿ:** ಬಸವಣ್ಣನವರು ಇನ್ನೂ ಬಂದಿಲ್ಲ. ಬರುತ್ತಾರೆ. ಇನ್ನೇನು ಬಂದರು. ಅವರು ನಮ್ಮ ಹಾಗೆ ಇಡೀ ದಿನ ಗುಣಿಸಿ ಭಾಗಿಸಿ ಮಾಡಬೇಕಾಗಿಲ್ಲ. ಅವರ ಬುದ್ಧಿ ಪಾದರಸ. ನಾವು ಹಗಲೆಲ್ಲಾ ಕೂಡಿ ಕಳೆದು ಗುಣಿಸಿ ಎಣಿಸಿ ಮಾಡುವುದನ್ನು ಅವರು ಎರಡು ಗಳಿಗೆಯಲ್ಲಿ ಮಾಡಿ ಮುಗಿಸುತ್ತಾರೆ. ಯಾರೋ ಸಣ್ಣ ಮಾತಾಡಿದರು. ಸಣ್ಣ ಜನ ದೊಡ್ಡಮಾತು ಹೇಗಾಡುತ್ತಾರೆ? ಇವನು ಬೊಕ್ಕಸದ ದುಡ್ಡು ತಿನ್ನುತ್ತಾನೆ ಎಂದರು. ಅದು ಅವರ ಕಿವಿಗೂ ಬಿತ್ತು. ಮನಸ್ಸಿಗೆ ತುಂಬಾ ನೋವಾಯಿತಂತೆ. ಆಗದೆ ಇರುತ್ತದೆಯೇ? ತುಂಬಾ ಮೃದುವಾದ ಮನಸ್ಸಿನ ಮನುಷ್ಯ. ಆತ ಅಂಥವರೇ ಸ್ವಾಮಿ. ಕೈ ಶುದ್ಧ, ಬಾಯಿ ಶುದ್ಧ, ಶುದ್ಧ ಅಪರಂಜಿ.

**ಪಶುಪತಿ ಶಾಸ್ತ್ರಿ:** ಬಸವಣ್ಣ ಅನ್ನಬೇಡಿ, ಬಸವ ಅನ್ನಿ. ಅವನು ಯಾವ ಸೀಮೆ ಅಣ್ಣ, ಯಾರಿಗೆ ಅಣ್ಣ? ನೋಡಿ, ಅವನ ವಿಷಯ ಮಾತಾಡಬೇಕು ಅಂದರೆ ನನಗೆ ಆಗೋಲ್ಲ. ಅವನ ಹೆಸರೆತ್ತಿದರೆ ಕೋಪ ಬಂದು ಮೈಯೆಲ್ಲ ಉರಿಯುತ್ತೆ. ಶತ್ರು ಸ್ವಾಮಿ, ಅವನು, ನಮಗೆಲ್ಲ ಪರಮ ಶತ್ರು.

ಅವತ್ತು ಏಕೋ ಏನೋ ನಮ್ಮ ಗ್ರಹಚಾರ ಕೆಟ್ಟು ಲೆಕ್ಕ ತಪ್ಪಿತ್ತು. ಬೆಪ್ಪರು ಸ್ವಾಮಿ ನಾವು, ಬೆಪ್ಪರು. ನಾವೇ ನಾಲ್ಕು ಜನ ನಿಧಾನವಾಗಿ ನೋಡಿದ್ದರೆ, ಇನ್ನೊಂದು ಸಲ ಕೂಡಿ ಕಳೆದು ಮಾಡಿದ್ದರೆ ಲೆಕ್ಕ ಸರಿಹೋಗದೆ ಏನಾಗುತ್ತಿತ್ತು? ಅಲ್ಲಿ ನಮ್ಮ ಅಧಿಕಾರಿಗಳು ಬೇರೆ ಕುಳಿತಿದ್ದರು. ಬುದ್ಧಿ ಮಂಕಾಗಿತ್ತು. ಅವನು ಲೆಕ್ಕದಲ್ಲಿ ಜಾಣ, ಇಲ್ಲಾ ಅನ್ನೋಲ್ಲ.

ಗುಣಕ್ಕೆ ಯಾಕೆ ಮತ್ಸರ? ಆದರೆ ಲೋಕದಲ್ಲಿ ಯಾರೂ ಮಾಡದ್ದನ್ನ ನಿಮ್ಮ ಬಸವ ಮಾಡಿ ಬಿಡಲಿಲ್ಲ ಅಂತ ಹೇಳೋಕೆ ಹೊರಟೆ ಅಷ್ಟೆ.

**ಚೆನ್ನಬಸವಣ್ಣ:** ಅವರು ನನ್ನ ಸೋದರ ಮಾವ, ತಾಯಿಯ ತಮ್ಮ. ನನ್ನ ತಾಯಿ ಅವರಿಗೆ ಒಡಹುಟ್ಟಿದ ಅಕ್ಕ. ಅವರು ಮಾತ್ರ ತಮ್ಮನ್ನನ್ನು ಮಗನಿಗಿಂತ ಹೆಚ್ಚು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಹೀಗಾಗಿ ಮಾವ ನನಗೆ ಒಂದು ಲೆಕ್ಕಕ್ಕೆ ಅಣ್ಣನಂತೆಯೇ ಇದ್ದರು. ಅಷ್ಟೂ ಪ್ರೀತಿಯಿಂದ ನನ್ನನ್ನು ಬೆಳಸಿದರು. ಜೊತೆಗೆ ನನಗೆ ಗುರುವೂ ಆದರು. ಲೋಕದಲ್ಲಿ ಯೋಗ್ಯತೆ ಇರುವ ಇಲ್ಲದಿರುವ ಪ್ರತಿಯೊಬ್ಬರೂ ಗುರುವಾಗಲು ಹಾತೊರೆಯುತ್ತಾರೆ. ಗುರುಗಳ ಗುರುವಾದ ಈ ವ್ಯಕ್ತಿಯೋ ತಾನು ಶಿಷ್ಯರೆಲ್ಲರ ಶಿಷ್ಯ ಎಂದು ಹೇಳುತ್ತಾರೆ, ಹಾಗೆಯೇ ನಡೆಯುತ್ತಾರೆ.

**ಗಂಗಾಂಬಿಕೆ:** ನಮ್ಮ ಮನೆಯವರ ವಿಷಯ ಕೇಳುತ್ತೀರಾ? ಅವರ ವಿಷಯ ನಾನು ಏನು ತಾನೆ ಹೇಳಲಿ? ಚೊಕ್ಕ ಚಿನ್ನ. ಅರಮನೆಯ ಕೆಲಸ, ಶಿವಪೂಜೆ, ಶಿವನ ಭಕ್ತರ ಪೂಜೆ ಅಷ್ಟೇ ಇವರಿಗೆ ಗೊತ್ತಿರುವುದು. ಹೊಲಗೇರಿಗೆ ಹೋಗುತ್ತಾರೆ, ಹೊಲೆಯರನ್ನು ಮನೆಗೆ ಬಿಟ್ಟುಕೊಳ್ಳುತ್ತಾರೆ, ಮಡಿ ಇಲ್ಲ, ಮೈಲಿಗೆ ಇಲ್ಲ. ಊರು ಹೊಲಗೇರಿ ಒಂದು ಮಾಡಿಬಿಟ್ಟ ಎಂದು ಜನ ಅನ್ನುತ್ತಾರಂತೆ. ಇವೆಲ್ಲ ಸರಿಯೋ ತಪ್ಪೋ? ಇವರು ಮಾಡಿರುವುದರಿಂದ ಸರಿಯೇ ಇರಬೇಕು. ತಪ್ಪು ಹೆಜ್ಜೆ ಇಡುವ ಮನುಷ್ಯ ಅಲ್ಲ ಇವರು.

**ನೀಲಲೋಚನೆ:** ನಮ್ಮ ಮನೆಯವರೇ, ಲೋಕದ ಬಾಯಿ ತುಂಬ ಅವರೇ, ನಿಜ. ಮೆಚ್ಚುವವರು ಮೆಚ್ಚುತ್ತಾರೆ, ತೆಗಳುವವರಿಗಂತೂ ಲೆಕ್ಕವೇ ಇಲ್ಲ. ಇವರಿಗೆ ಚಾಲೂಕು ಕಡಮೆ. ಹಾಗಂದೆ ಅಂತ ಬೇಸರ ಮಾಡಿಕೋ ಬೇಡಿ. ಸುಖವಾಗಿ ಬದುಕೋ ರೀತಿ ಇವರಿಗೆ ತಿಳೀದು. ಕೈ ಹಿಡಿದ ಗಂಡನ್ನ ಹೀಗೆಲ್ಲಾ ಇನ್ನೊಬ್ಬರ ಮುಂದೆ ಅಂತಾಳೆ ಅಂತ ದೂರಬೇಡಿ. ನೀವು ಕೇಳಿದಿರಿ, ನಾನೂ ಮನಸ್ಸಿನಲ್ಲಿರೋದನ್ನೆಲ್ಲ ಹೇಳಿ ಬಿಡ್ತೇನೆ. ನಾನೇನು ಹೊಸದಾಗಿ ಹೇಳ್ತಾ ಇಲ್ಲ, ಹೇಳಿ ಹೇಳಿ ಸಾಕಾಗಿದೆ. ಕೇಳೋರು ಯಾರು? ಬಾಯಲ್ಲಿ ಮಾತ್ರ 'ಲೋಕದ ಚಿಂತೆ ನಮಗೇಕೆ?' ಅಂತಾರೆ. ಆದರೆ ಇವರಿಗಿರೋ ಚಿಂತೆ ಎಲ್ಲಾ ಲೋಕದ್ದೇ. ಅವರ ಕಣ್ಣಿಗೆ ಹೊಳೆಯೋದೆಲ್ಲ ಚಿನ್ನ, ಬೆಳ್ಳಗಿರೋದೆಲ್ಲ ಹಾಲು. ಇವರು ಹಸುಗೂಸಿನಂಥವರು.

****************

ಬಾಗೇವಾಡಿಯ ಸಮಾರಂಭ ಮುಗಿಸಿಕೊಂಡು ಬಿಜಾಪುರದ ಮಾರ್ಗವಾಗಿ ಹಿಂದಿರುಗುವಾಗ ಬಸವ ಜಯಂತಿ ನಿಮಿತ್ತ ನಗರದ ಪ್ರಮುಖ ಬೀದಿಯಲ್ಲಿ ಬಸವಭಕ್ತರ ಮೆರವಣಿಗೆ ಸಾಗಿತ್ತು. ಅಶ್ವಾರೋಹಿ ಬಸವಣ್ಣನವರ ಪುತ್ಥಳಿ ಇರುವ ವೃತ್ತವನ್ನು ಸಮೀಪಿಸಿದಾಗ ನಮ್ಮ ಕಣ್ಸೆಳೆದ ಅಪರೂಪದ ದೃಶ್ಯವೆಂದರೆ ಮೆರವಣಿಗೆಯಲ್ಲಿ ನಡೆದು ಬರುತ್ತಿದ್ದ ಬುರ್ಖಾಧರಿಸಿದ ನೂರಾರು ಮುಸ್ಲಿಂ ಮಹಿಳೆಯರು! ದೇಶದ ವಿಸ್ಮಯಗಳಲ್ಲಿ ಒಂದಾದ ಗೋಳಗುಮ್ಮಟದಂತೆ ಈ ಮೆರವಣಿಗೆಯೂ ಒಂದು ವಿಸ್ಮಯಕಾರಿ ಘಟನೆಯಾಗಿತ್ತು. ಶೇಕಡ 45ರಷ್ಟು ಮುಸ್ಲಿಂ ಜನಸಂಖ್ಯೆಯುಳ್ಳ ಈ ನಗರದಲ್ಲಿ ಇದುವರೆವಿಗೂ ಒಂದೂ ಕೋಮುಗಲಭೆ ನಡೆದಿಲ್ಲ. 'ಸಕಲಜೀವಾತ್ಮರಿಗೆ ಲೇಸನೇ ಬಯಸಿದ' ಬಸವಣ್ಣನವರಿಗೆ ಇದಕ್ಕಿಂತ ಹೆಚ್ಚಿನ ಗೌರವ ಸಲ್ಲಬೇಕಾದ್ದು ಮತ್ತೇನಿದೆ!

19.5.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ